ಸದ್ಯ... ಕೋಣೆಯ ಬಾಗಿಲು ತೆರೆದಿತ್ತು. ನಾನು ಮೆಲ್ಲನೆ ಬಾಗಿಲನ್ನು ತಳ್ಳಿ, ನನ್ನ ತಲೆಯನ್ನು ಸ್ವಲ್ಪ ಒಳಗೊಯ್ದು ನೋಡಿದೆ; ಅಂಶುಲ್ ಹಾಸಿಗೆಯಲ್ಲಿ ಕೂತು ತನ್ನ ಲ್ಯಾಪ್‌ಟಾಪ್‌ನಲ್ಲಿ ಮಗ್ನನಾಗಿದ್ದ. ನಾನು ಮೆಲ್ಲನೆ ಬಾಗಿಲನ್ನು ತಟ್ಟಿದೆ, ಅಂಶುಲ್ ಗಾಬರಿಗೊಂಡ, "ಡ್ಯಾಡಿ, ಒಳಗೆ ಬನ್ನಿ. ಹೊರಗಿನಿಂದಲೇ..." ನಾನು ಸಂಯಮ ತಂದುಕೊಂಡು, ತಡವಾಗಿ ಪುನರುಚ್ಚಿಸಿದ್ದ ನನ್ನ ಡಯಲಾಗನ್ನು ಅವನೆದುರು ಕಾರಿದೆ, "ಅಂಶುಲ್, ಲುಕ್... ನಿನಗೆ ಬೇಕಾದ ಹುಡುಗಿಯನ್ನು ನೀನೇ ನೋಡಿಕೋ. ಇನ್ನು ನನ್ನಿಂದ ಇದು ಸಾಧ್ಯವಿಲ್ಲ. ಎನಫ್..."

"ಏನಾಯ್ತು ಡ್ಯಾಡಿ? ಯಾರೊಂದಿಗಾದರೂ ಜಗಳವಾಯಿತೇ?"

"ಜಗಳ? ನೋ... ಹೇಳಿದೆನಲ್ಲ. ನೀನು ಈ ಕಾಲದ ಹುಡುಗ. ನಿನ್ನ ಅಪ್ಪನಿಂದ ಹುಡುಗಿಯನ್ನು ಹುಡುಕಿಸುತ್ತಿದ್ದೀಯಲ್ಲ, ನಿನಗೆ ನಾಚಿಕೆಯಾಗಲ್ವ? ಲುಕ್ ಸನ್! ಇದು ನನ್ನ ಸಾಮರ್ಥ್ಯಕ್ಕೆ ಹೊರತಾಗಿದೆ..."

"ಡ್ಯಾಡಿ, ನನಗೆ ಮದುವೆ ಮಾಡಿಕೊಳ್ಳುವ ಅವಸರವಿಲ್ಲ. ನಿಜ ಹೇಳಬೇಕೆಂದರೆ, ಮದುವೆ ನನ್ನ ಸಾಮರ್ಥ್ಯಕ್ಕೆ ಮೀರಿದ್ದು. ಚಿಲ್..." ಅಂಶುಲ್ ಒಮ್ಮೆಲೆ ನಕ್ಕ.

"ಚಿಲ್ ಇಲ್ಲ, ಗಿಲ್ ಇಲ್ಲ. ನೀನು ನಿನ್ನ ಜವಾಬ್ದಾರಿಯನ್ನು ನನ್ನ ಮೇಲೆ ಹೇರಬೇಡ."

ಅಂಶುಲ್ ನಗುತ್ತಾ, ತಡೆದು ಹೇಳಿದ, "ನೀವೇಕೆ ಇಷ್ಟು ಸೀರಿಯಸ್ ಆದಿರಿ? ಈಗ ಹೇಗೆ ನಡೆಯುತ್ತಿದೆಯೋ, ಹಾಗೆಯೇ ನಡೆದುಕೊಂಡು ಹೋಗಲಿ. ನೀವೇಕೆ ಟೆನ್ಷನ್ ಮಾಡಿಕೊಳ್ಳುತ್ತಿದ್ದೀರ?"

ಟೆನ್ಷನ್? ನಾನು ಹಿಂದಕ್ಕೆ ಸರಿದೆ. ಅವನ ಕೋಣೆಯ ಬಾಗಿಲನ್ನು ಮುಚ್ಚಿ ಮನೆಯಿಂದ ಹೊರಗೆ ಬಂದೆ. ರಾತ್ರಿಯ ವೇಳೆಯಾಗಿತ್ತು. ರಸ್ತೆ ಶೂನ್ಯವಾಗಿತ್ತು. ನಾನು ವೇಗವಾಗಿ ನಡೆಯಲಾರಂಭಿಸಿದೆ. ಪಕ್ಕದ ಮನೆಯಲ್ಲಿ ಯಾರೋ ಈ ವೇಳೆಯಲ್ಲಿ ಗಟ್ಟಿ ಧ್ವನಿಯಲ್ಲಿ ಹಾಡು ಹಾಕಿದ್ದ. ನಾನು ನಿಂತು ತಿಳಿಯಲು ಪ್ರಯತ್ನಿಸಿದೆ. ಇದು ಹಿಂದಿ ಹಾಡೇ? ಇಂಗ್ಲಿಷ್ ಹಾಡೇ? ಹಾಡು ಹೊಸದೇ? ಅಥವಾ ಹಳೆಯದೇ? ಕೆಲವು ಶಬ್ದಗಳು ತಿಳಿದವು... ಅಂಗಾರಾ, ಹೋಶ್, ಸೆಕ್ಸ್ ಟಾಯ್, ಲೈಫ್‌ನ ಎಫ್ ಓ... ಹೊಸದೇ ಇರಬೇಕು. ರೇಗುತ್ತಾ ಮುಂದುವರಿದೆ. ಈಚೆಗೆ ಬಹುತೇಕ ಸಂಗತಿಗಳು ಹೊಸದಾಗಿ ಕಾಣಿಸುತ್ತಿವೆ. ಫೋನಿನ ಹೊಸ ಆ್ಯಪ್. ಹೊಸ ಹಾಡುಗಳು, ಹೊಸ ಜಾರ್ಗನ್... ವಯಸ್ಸು ತೀವ್ರ ಗತಿಯಲ್ಲಿ ಸಾಗುತ್ತಿದೆ, ಹಗಲು ವೇಳೆಯಲ್ಲಿ ಅಪ್‌ಡೇಟ್ ಮಾಡಿದ್ದೆಲ್ಲವೂ, ರಾತ್ರಿಯಾಗುತ್ತಲೇ ಹಳೆಯದಾಯಿತು ಎಂದು ಅನ್ನಿಸುತ್ತದೆ.

ರಸ್ತೆ ಕೊನೆಯಾಗಿ ಹೈವೇ ಆರಂಭವಾಯಿತು. ವೇಗವಾಗಿ